**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಕ್ರಿ ಮಿಸ್ 170/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.02**

**ದಿನಾಂಕಃ** 04.03.2025

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಬಿ ಜಿ ಬಿ ವಕೀಲರಿಂದಃ**

ನನ್ನ ಗಂಡ ಪಶು ಆಸ್ಪತ್ರೆಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಾರೆ. ನನ್ನ ಮಗಳು ಏನೂ ಕೆಲಸ ಮಾಡುವುದಿಲ್ಲ. ನನ್ನ ಗಂಡ ಸುಮಾರು 10 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ನಿಪಿ.20 ರಿಂದ 26 ರಶೀದಿ ಅಲ್ಲ ಕೇವಲ ರೆಸ್ಟಿನೇಶನ್ ಎಂದರೆ ಸರಿಯಲ್ಲ. ನನಗೂ ಮತ್ತು ನನ್ನ ಗಂಡನಿಗೂ ಯಾವುದೇ ದುಡಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಸರ್ಕಾರಿ ಪಶು ಆಸ್ಪತ್ರೆಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಅರ್ಜಿದಾರರು ಮದುವೆಯಾದ ನಂತರ ಕೇವಲ 3-4 ದಿನ ಮಾತ್ರ ಎದುರುದಾರನೊಂದಿಗೆ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು 1 ವರ್ಷಗಳ ಕಾಲ ಇದ್ದರು ಎಂದು ನುಡಿಯುತ್ತಾರೆ. ಎದುರುದಾರರು ನನ್ನ ಮಗಳನ್ನು ಮದುವೆ ಆಗುವ ಪೂರ್ವದಲ್ಲಿ ಒಂದು ಮದುವೆ ಆಗಿತ್ತು ನನ್ನ ಮಗಳು ಎರಡನೇ ಹೆಂಡತಿ ಎಂದರೆ ಸರಿಯಲ್ಲ. ಎದುರುದಾರರು ಅರ್ಜಿದಾರರ ವಿರುದ್ಧ ವಿವಾಹ ಪುನರ್ ಪ್ರಾಪ್ತಿಗೆ ಲಕ್ಷ್ಮೇಶ್ವರ ದಲ್ಲಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಯಾವುದೇ ವರದಕ್ಷಿಣೆ, ಬಂಗಾರ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಎದುರುದಾರರು ವರದಕ್ಷಿಣೆಗೆ ಪೀಡಿಸಿದ ಬಗ್ಗೆ ಅರ್ಜಿದಾರರು ಎದುರುದಾರರ ವಿರುದ್ಧ ದೂರು ನೀಡಿದ್ದಾರೆ. ಈ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿದ್ದೇವೆ. ಎದುರುದಾರರ ತಾಯಿ ಅಣ್ಣ ಮತ್ತು ತಂಗಿ ಯಾರೂ ಸಹ ಯಾವುದೇ ರೀತಿ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಎದುರುದಾರರು ತಮ್ಮ 2 ನೇ ಮದುವೆಗಾಗಿ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಪೀಡಿಸಿದ್ದಾರೆ ಎಂದು ಬರೆಸಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಬರೆದಿರುವ ಸಂಗತಿಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಈ ದಿನಾ ನ್ಯಾಯಾಲಯಕ್ಕೆ ನನ್ನ ಮಗಳಿಗೆ ನ್ಯಾಯಾ ಸಿಗಬೇಕು ಎಂದು ಸಾಕ್ಷ್ಯ ನುಡಿಯಲು ಬಂದಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಮಾನ್ಯ 2 ನೇ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿದಾರರು ಕಲಂ 125 ಸಿ ಆರ್ ಪಿ ಸಿ ಅಡಿ ಸಲ್ಲಿಸಿದ ಅರ್ಜಿ ವಜಾ ಆಗಿದೆ ಎಂದರೆ ಸಾಕ್ಷಿಯು ಎದುರುದಾರರು ವಜಾ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರು 1 ನೇ ಹೆಂಡತಿ ಗದಗ ನ್ಯಾಯಾಲಯದಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದು ಮಾಹಿತಿ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈ ರೀತಿ ಸುಳ್ಳು ಅರ್ಜಿ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಮಗಳ ಮದುವೆ 2017 ರಲ್ಲಿ ಆಗಿರುತ್ತದೆ. ನಿಪಿ.20 ರಿಂದ 26 2014 ನೇ ಇಸ್ವಿಯಲ್ಲಿ ಪಡೆದ ದಾಖಲೆಗಳು ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ